# ಬೆಂಗಳೂರು ವಿಶವಿದ್ಯಾಲಯ

## ಕನ್ನಡ ಐಚ್ಛಿಕ ಇಂಟರ್ನ್‌ಶಿಪ್ / ಸಂಶೋಧನಾ ಅಧ್ಯಯನ ಮಾರ್ಗಸೂಚಿಗಳು

ದಿನಾಂಕ: ೧೯–೦೩–೨೦೨೪ರಂದು ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವಿವಿದ್ಯಾಲಯ, ಬೆಂಗಳೂರು ಇಲ್ಲಿ ಕನ್ನಡ ಸ್ನಾತಕ ಅಧ್ಯಯನ ಮಂಡಲಿಯ ಸಭೆ ನಡೆಸಿ, ಚರ್ಚಿಸಿ, ಅಂತಿಮಗೊಳಿಸಿ, ಅನುಮೋದಿಸಿದ ಕನ್ನಡ ಐಚ್ಛಿಕ ಇಂಟರ್ನ್‌ಶಿಪ್/ ಸಂಶೋಧನಾ ಅಧ್ಯಯನ ಮಾರ್ಗಸೂಚಿಗಳು.

| | |
|---|---|
| **ಕಾರ್ಯಕ್ರಮದ ಹೆಸರು** | **೬ನೆ ಸೆಮಿಸ್ಟರ್ ಕನ್ನಡ ಐಚ್ಛಿಕ ಇಂಟರ್ನ್‌ಶಿಪ್/ ಸಂಶೋಧನಾ ಅಧ್ಯಯನ** |
| **ಕೋರ್ಸ್ ಶೀರ್ಷಿಕೆ** | **ಐಡಿಎಸ್ (ಇಂಟರ್ನ್‌ಶಿಪ್ ಡಿಸಿಪ್ಲಿನ್ ಸ್ಪೆಸಿಫಿಕ್) – ಐಚ್ಛಿಕ ಕನ್ನಡ** |
| **ಪರೀಕ್ಷಾ/ಮೌಲ್ಯಾಂಕನ ವಿಧಾನ** | **ಪ್ರಾಜೆಕ್ಟ್ ಕಾರ್ಯದ ಪರಿಶೀಲನೆ / ಸಂದರ್ಶನ/ ಚಟುವಟಿಕೆಗಳ ದಫ್ತರಿನ ಪರಿಶೀಲನೆ** |
| **ಒಟ್ಟು ಕಲಿಕಾ ಅವಧಿ = ೬೦** | **ಕ್ರೆಡಿಟ್ಟುಗಳು– ೦೨, ಒಟ್ಟು ಅಂಕಗಳು = ೫೦** |

**ಪೀಠಿಕೆ**

ಇಂಟರ್ನ್‌ಶಿಪ್/ಅಧ್ಯಯನ ಎನ್ನುವುದು ವೃತ್ತಿಪರ ಕಲಿಕೆಯ ಒಂದು ಕ್ರಿಯಾತ್ಮಕ ಅನುಭವ. ವಿದ್ಯಾರ್ಥಿಗಳಿಗೆ ಅವರ ಇಷ್ಟದ ಮತ್ತು ಆಯ್ಕೆಯ ವೃತ್ತಿ ಅನ್ವೇಷಣೆ, ಸಂಶೋಧನಾ ಅಧ್ಯಯನ ಮತ್ತು ಕೌಶಲ್ಯ ಗಳಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಇದನ್ನು ವಿನ್ಯಾಸ ಮಾಡಲಾಗಿದೆ. ಅಕ್ಷರಗಳ ಮೂಲಕ ಜ್ಞಾನವನ್ನು ಪಡೆಯುವುದು ಮಾತ್ರವಲ್ಲದೆ ಆ ಜ್ಞಾನವನ್ನು ಜೀವನಕ್ಕೆ ಅನ್ವಯಿಸುವ ಮತ್ತು ಜೀವನೋಪಾಯಕ್ಕೆ ಬಳಸುವ ಸಾಧ್ಯತೆಗಳನ್ನು ಶೋಧಿಸುವುದು ಹಾಗೂ ಜ್ಞಾನದ ಉತ್ಪಾದನೆಯ ಕಡೆಗೆ ವಿದ್ಯಾರ್ಥಿಗಳನ್ನು ತೊಡಗಿಸುವುದು ಇಲ್ಲಿನ ಪ್ರಮುಖ ಗುರಿಯಾಗಿದೆ.

ಈ ಇಂಟರ್ನ್‌ಶಿಪ್ ಕಲಿಕೆಯು/ ಸಂಶೋಧನಾ ಅಧ್ಯಯನವು ಪದವಿಯ 6 ನೇ ಸೆಮಿಸ್ಟರ್‌ನಲ್ಲಿ ಒಟ್ಟಾರೆ ಅಂದಾಜು ೬೦ ಗಂಟೆಗಳ ಅವಧಿಯ ಕಲಿಕೆಯದ್ದಾಗಿದೆ. ಇದರಲ್ಲಿ ಕೌಶಲ್ಯಗಳ ಗೊಂಚಲನ್ನು ಗಳಿಸಲು ಮತ್ತು ಅವನ್ನು ಬಳಸಲು ಅನುವಾಗುವಂತೆ ಅವಕಾಶಗಳನ್ನು ಆಯಾ ಕಾಲೇಜು ಕಲಿಕಾ ವಲಯಗಳು ಸೃಷ್ಟಿಸಬೇಕಿದೆ. ಒಂದು ಕಿರು ಯೋಜನೆಯನ್ನು ಇದರ ಅಂಗವಾಗಿ ವಿದ್ಯಾರ್ಥಿಗಳು ತಯಾರಿಸಿ ಸಲ್ಲಿಸಬೇಕಾಗಿರುತ್ತದೆ. ಉನ್ನತ ಅಧ್ಯಯನ ಮತ್ತು ಉನ್ನತ ಸಂಶೋಧನೆಗೆ ತೆರಳಲು ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಈ ಕಲಿಕೆಯನ್ನು ಅಂತಹ ಆಸಕ್ತಿಗೆ ಪೂರಕವಾಗಿ ಬಳಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಪ್ರಾಜೆಕ್ಟ್ ಮೇಲ್ವಿಚಾರಕರೊಂದಿಗೆ ಸಹಭಾಗಿ ಪ್ರಕಟಣೆಗಳನ್ನೂ ಮಾಡಬಹುದು.

ಸದರಿ ಇಂಟರ್ನ್‌ಶಿಪ್‌ಗಳಲ್ಲಿ ಕಾಲೇಜುಗಳಲ್ಲಿ ಮೇಲ್ವಿಚಾರಕರ ಮಾರ್ಗದರ್ಶನ ಪಡೆದು ವಿದ್ಯಾರ್ಥಿಗಳು; ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು, ಸಂಶೋಧನಾ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಉದ್ಯಮಗಳು, ಸಂಶೋಧನೆಯಲ್ಲಿ ತೊಡಗಿರುವ ಕೇಂದ್ರಗಳು, ನವೀನತೆ ಮತ್ತು ಉದ್ಯಮಶೀಲತಾ ವ್ಯಾಪಾರ ಸಂಸ್ಥೆಗಳು, ಸ್ಥಳೀಯ ಉದ್ಯಮಗಳು, ಕಲಾವಿದರು, ಪತ್ರಿಕಾಲಯಗಳು, ದೂರದರ್ಶನ ಕೇಂದ್ರಗಳು, ಮುದ್ರಣ ಮಾಧ್ಯಮಗಳು, ಪುಸ್ತಕ ವ್ಯಾಪಾರಿಗಳು, ಇತರ ಕರಕುಶಲ ಜನರು ಮತ್ತು ಇದೇ ರೀತಿಯ ಇತರ ಘಟಕಗಳನ್ನು ಸಂಪರ್ಕಿಸಿ (ಆಯಾ ವಿದ್ಯಾರ್ಥಿಗಳ ಅನುಕೂಲಕ್ಕೆ ಅನುಸಾರವಾಗಿ) ವಾರಾಂತ್ಯದ ಅನುಭವಾತ್ಮಕ ಕಲಿಕೆಯಲ್ಲು ತೊಡಗಬಹುದು.

### ಅ) ಇಂಟರ್ನ್‌ಶಿಪ್‌ನ ಸ್ವರೂಪ, ವಿನ್ಯಾಸ.

೧. ಎಲ್ಲ ವಿದ್ಯಾರ್ಥಿಗಳೂ ತಮ್ಮ ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು / ಸಂಶೋಧನಾ ಅಧ್ಯಯನವನ್ನು ತಮ್ಮ ತಮ್ಮ ಆಪೇಕ್ಷೆ, ಅವಕಾಶ, ಸಾಧ್ಯತೆಗಳಿಗೆ ಅನುಗುಣವಾಗಿ ಸರ್ಕಾರಿ ಸಂಸ್ಥೆಗಳು, MSMEಗಳು, ಎನ್‌ಜಿಓಗಳು, ಸ್ವಸಹಾಯ ಸಂಘಗಳು, ಸಾಮಾಜಿಕ ಸಂಸ್ಥೆಗಳು, ಸಹಕಾರಿ ಪ್ರದರ್ಶನ ಕಲಾ ಕೇಂದ್ರಗಳು, ದೃಶ್ಯ ಮಾಧ್ಯಮ ಕೇಂದ್ರಗಳು, ವಸ್ತುಸಂಗ್ರಹಾಲಯಗಳು, ಶಾಸನ, ಸಾಂಸ್ಕೃತಿಕ ಅಧ್ಯಯನ ಸಂಸ್ಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರ, ಕುವೆಂಪು ಭಾಷಾ ಭಾರತಿ ಪ್ರಾದಿಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ರಂಗಸಂಸ್ಥೆಗಳು, ಕಲಾಸಂಸ್ಥೆಗಳು, ಪ್ರಕಾಶನ ಸಂಸ್ಥೆಗಳು, ನಿಯತಕಾಲಿಕೆಗಳು ಮತ್ತು ಪತ್ರಿಕೆಗಳು ಶೈಕ್ಷಣಿಕ ಸಂಸ್ಥೆಗಳು ಅಥವಾ ತಮ್ಮ ಆಯ್ಕೆಯ ಸೂಕ್ತ ಸಂಸ್ಥೆ/ಸಂಸ್ಥೆಗಳೊಂದಿಗೆ ೪೫ ಗಂಟೆಗಳ ಕಾಲ ಕಾಲೇಜಿನಿಂದ ಹೊರಗೆ ಅನುಭವಾತ್ಮಕ ಕಲಿಕೆಯನ್ನು ನಡೆಸಬಹುದು. ಇನ್ನುಳಿದಂತೆ ಪ್ರಾಜೆಕ್ಟ್ ರಚನೆ, ಚಟುವಟಿಕೆಗಳನ್ನು

ನಡೆಸುವುದು ಮತ್ತು ಅವುಗಳನ್ನು ದಾಖಲಾತಿ ಪುಸ್ತಕದಲ್ಲಿ (ದಫ್ತರಲ್ಲಿ ) ನಮೂದಿಸುವುದು, ಅಧ್ಯಯನ, ಬರವಣಿಗೆ ಅಗತ್ಯವಿದ್ದಲ್ಲಿ ಮಾಡುವುದು, ಚಿಂತನೆ–ಸಂವಾದ ಚರ್ಚೆ ಇದ್ದಲ್ಲಿ ಮೇಲ್ವಿಚಾರಕರೊಂದಿಗೆ ತೊಡಗುವುದು ಮತ್ತಿತರ ತಮ್ಮ ಪ್ರಾಜೆಕ್ಟಿನ ಅಗತ್ಯಕ್ಕೆ ಅನುಗುಣವಾದ ಕಾರ್ಯಕ್ಕಾಗಿ ಇನ್ನುಳಿದ ೪೫ ಗಂಟೆಗಳನ್ನು ಕಾಲೇಜಿನ ಒಳಗೆ ಬಳಸಬಹುದು. ಒಟ್ಟಾರೆಯಾಗಿ ವಿಶ್ವವಿದ್ಯಾಲಯದ ಮಾರ್ಗಸೂಚಿಗಳ ಅನ್ವಯ ಕಲಿಕೆಗೆ ೯೦ ಗಂಟೆಗಳನ್ನು ನಿಗಧಿಸಿದೆ.  ಹೊರಗಿನ ಅನುಭವಾತ್ಮಕ ಕಲಿಕೆ ಮತ್ತು ಕಾಲೇಜಿನ ಒಳಗಿನ ಕಲಿಕೆ ಈ ಎರಡರಲ್ಲಿ ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಲು ಆಯಾ ಮೇಲ್ವಿಚಾರಕರಿಗೆ ಸ್ವಾಂತಂತ್ರ್ಯ ನೀಡಲಾಗಿದೆ.

೨. ಪ್ರಿನ್ಸಿಪಾಲ್ ಸೂಚಿಸಿದ ಕನ್ನಡ ವಿಭಾಗದ ಹಿರಿಯ ಅಧ್ಯಾಪಕರು ಅಥವಾ ವಿಭಾಗದ ಮುಖ್ಯಸ್ಥರು (HOD) ಇಂಟರ್ನ್‌ಶಿಪ್/ಅಧ್ಯಯನ/ಕಲಿಕೆ ಉಪಕ್ರಮಕ್ಕೆ ಸೂಕ್ತವಾದ ಇಂಟರ್ನ್‌ಶಿಪ್ ಸಂಸ್ಥೆಗಳು ಮತ್ತು ಕೆಲಸದ ಕಲಿಕೆಯ ಸಂಸ್ಥೆ/ಸ್ಥಳಗಳನ್ನು ಗುರುತಿಸುವ ಮತ್ತು ಅವುಗಳ ಸಂಪರ್ಕ ಒದಗಿಸಿಕೊಡುವ ಕೆಲಸವನ್ನು ವಿದ್ಯಾರ್ಥಿಗಳ ಜೊತೆಯಲ್ಲಿ ಸಕ್ರಿಯವಾಗಿ ನಿರ್ವಹಿಸಬೇಕು. ಕೆಳಕಂಡ ಅನುಬಂಧದಲ್ಲಿ ಉಲ್ಲೇಖಿಸಿರುವ ಸಂಶೋಧನಾ ಅಧ್ಯಯನ ವಿಷಯಗಳನ್ನು ಹಂಚಿಕೆ ಮಾಡುವ ಮತ್ತು ಕಾಲಾವಧಿಯ ಅಧಿಸೂಚನೆಯನ್ನು ಕಾಲೇಜು ಮಟ್ಟದಲ್ಲಿ ಹೊರಡಿಸುವ ಕೆಲಸವನ್ನು ವಿಭಾಗದ ಮುಖ್ಯಸ್ಥರ ಸಲಹೆಯ ಮೇರೆಗೆ ಕಾಲೇಜಿನ ಪ್ರಾಂಶುಪಾಲರು ಮಾಡಬೇಕಾಗುತ್ತದೆ.

೩. ಇಂಟರ್ನ್‌ಶಿಪ್/ಅಧ್ಯಯನ ಗುಂಪುಗಳಿಗೆ ಮೀಸಲಾದ ಮೇಲ್ವಿಚಾರಕರು ಅಥವಾ ಮಾರ್ಗದರ್ಶಕರನ್ನು ಕಾಲೇಜಿನ ಪ್ರಾಂಶುಪಾಲರು ನಿಯೋಜಿಸತಕ್ಕುದು. ಅವರು ಆಯಾ ವಿಭಾಗದಿಂದ ಅಧ್ಯಾಪಕ ಸದಸ್ಯರಾಗಿರುತ್ತಾರೆ. ಈ ಮಾರ್ಗದರ್ಶಕರು ಇಂಟರ್ನ್‌ಶಿಪ್ ಅವಧಿಯುದ್ದಕ್ಕೂ ಮಾರ್ಗದರ್ಶನ, ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಬೆಂಬಲವನ್ನು ಒದಗಿಸುತ್ತಾರೆ

೪. ವಿದ್ಯಾರ್ಥಿಗಳು ಸ್ವತಃ ಇಚ್ಚಿಸಿದಲ್ಲಿ ಒಬ್ಬೊಬ್ಬರೆ ವಯಕ್ತಿಕವಾಗಿ ಇಲ್ಲವೆ ವಿಭಾಗದ ಮುಖ್ಯಸ್ಥರು ಮೂರರಿಂದ ಐದು ಮಂದಿಯ ಸಣ್ಣ ಗುಂಪುಗಳನ್ನು ರಚಿಸಿ ಇಂಟರ್ನ್‌ಶಿಪ್/ಅಧ್ಯಯನ ಅನ್ನು ಕೈಗೊಳ್ಳಬಹುದು. ಗುಂಪುಗಳಲ್ಲಿ ಕಲಿಕೆ ನಿರ್ವಹಿಸಿದರೂ ವರದಿಯನ್ನು/ ಪ್ರಬಂಧವನ್ನು ಒಬ್ಬೊಬ್ಬರೂ ಪ್ರತ್ಯೇಕವಾಗಿ ಸಲ್ಲಿಸಬೇಕು. ಸಹಯೋಗದ ಕಲಿಕೆ ಮತ್ತು ಭಿನ್ನ ದೃಷ್ಟಿಕೋನಗಳನ್ನು ಬೆಂಬಲಿಸಲು, ಕಾಲೇಜು ಅಥವಾ ವಿಶ್ವವಿದ್ಯಾನಿಲಯದಲ್ಲಿ ಒಂದೇ ವಿಭಾಗದ ವಿದ್ಯಾರ್ಥಿಗಳ ಗುಂಪುಗಳನ್ನು ಗುರುತಿಸಿದ ಸಂಸ್ಥೆಗಳಲ್ಲಿ ಸಾಮೂಹಿಕವಾಗಿ ಇಂಟರ್ನ್‌ಶಿಪ್‌ಗಳಲ್ಲಿ ಭಾಗವಹಿಸಲು/ ಅಧ್ಯಯನದಲ್ಲಿ ತೊಡಗಲು ಪ್ರೋತ್ಸಾಹಿಸಬೇಕು.

೫. ಇಂಟರ್ನ್‌ಶಿಪ್ ಅನ್ನು/ ಅಧ್ಯಯನವನ್ನು ಪಾವತಿಸಿದ ಅಥವಾ ಪಾವತಿಸದ ಆಧಾರದ ಮೇಲೆ ಕಲಿಕೆಯ ಅವಧಿ ಮುಗಿದ ಆನಂತರವೂ ಮುಂದುವರಿಸಬಹುದು. ಇದು ಕಲಿಕಾರ್ಥಿಗಳ ಆಯ್ಕೆಯನ್ನು ಅವಲಂಬಿಸಿರುತ್ತದೆ.

೬. ವಿದ್ಯಾರ್ಥಿಯು ಇಂಟರ್ನ್‌ಶಿಪ್‌ನಲ್ಲಿ/ಅಧ್ಯಯನದಲ್ಲಿ ಆಕೆಯ/ಆತನ ದೈನಂದಿನ ಕಲಿಕೆಯ (ದಿನಾಂಕ ಮತ್ತು ಸಮಯದೊಂದಿಗೆ) ಚಟುವಟಿಕೆಯ ಲಾಗ್ ಪುಸ್ತಕವನ್ನು (ಚಟುವಟಿಕೆ ದಫ್ತರ) ಬರೆಯಬೇಕು ಮತ್ತು ಕೊನೆಯಲ್ಲಿ ಆಕೆಯ/ಆತನ ಕಲಿಕೆಯ ಒಟ್ಟಾರೆ ಸಾರಾಂಶವನ್ನು, ಕಲಿಕೆಯ ಸಂದರ್ಭದ ಸಮಸ್ಯೆ ಮತ್ತು ಸಾಧ್ಯತೆಗಳ ಎರಡು ಪುಟಗಳ ವರದಿಯನ್ನೂ ಬರೆಯಬೇಕು.

### ಆ) ಇಂಟರ್ನ್‌ಶಿಪ್ ಅವಧಿ ಮತ್ತು ಶೈಕ್ಷಣಿಕ ಗುಣಾಂಕಗಳು (ಕ್ರೆಡಿಟ್ಸ್)

ಇಟರ್ನ್‌ಶಿಪ್ ಭಾಗವಾಗಿ ಶೈಕ್ಷಣಿಕ ಕ್ರೆಡಿಟ್ ನೀಡಲು ಈ ಕೆಳಗಿನ ಚೌಕಟ್ಟನ್ನು ಪ್ರಸ್ತಾಪಿಸಲಾಗಿದೆ

| ಕ್ರ.ಸಂ. | ಕಲಿಕೆಯ ಬಗೆ | ಕಲಿಕೆಯ ಅವಧಿ | ಕಲಿಕೆಯ ಕ್ರಮಗಳು | ಗುಣಾಂಕಗಳು (ಕ್ರೆಡಿಟ್ಸ್) |
|---|---|---|---|---|
| ೧ | ಶೈಕ್ಷಣಿಕ ಅವಧಿಯಲ್ಲಿ ಅರೆಕಾಲಿಕ | ೮ರಿಂದ ೧೨ ವಾರಗಳ ಅವಧಿಗೆ ೯೦ ಗಂಟೆಗಳು | ಪ್ರಾಜೆಕ್ಟ್ ಕಾರ್ಯ/ ಸಂದರ್ಶನ/ ಪ್ರಬಂಧ/ ಚಟುವಟಿಕೆ ದಫ್ತರ ಪರಿಶೀಲನೆ | ೦೨ |

8 ರಿಂದ 12 ವಾರಗಳ ಅವಧಿಗೆ 90 ಗಂಟೆಗಳ ಅರೆಕಾಲಿಕ ಇಂಟರ್ನ್‌ಶಿಪ್/ ಪ್ರಾಜೆಕ್ಟ್ (ಯೋಜನಾ) ಕಾರ್ಯ / ವೈವಾ ವೋಸ್‌ಗಳಲ್ಲಿ ಕಲಿಕೆಯನ್ನು ಪರಿಶೀಲಿಸಿ ಕ್ರೆಡಿಟ್ಟುಗಳನ್ನು ನೀಡಬೇಕಾಗುತ್ತದೆ. ಒಟ್ಟಾರೆಯಾಗಿ ಇದಕ್ಕೆ ಎರಡು ಕ್ರೆಡಿಟ್ಟುಗಳು: ೫೦ ಅಂಕಗಳು ಇರುತ್ತವೆ.

## ಇ) ಮೌಲ್ಯಮಾಪನ

೧. ಇಂಟರ್ನ್‌ಶಿಪ್‌ನ/ ಅಧ್ಯಯನದ ಮೌಲ್ಯಮಾಪನವನ್ನು ವಿದ್ಯಾರ್ಥಿ ಸಲ್ಲಿಸಿದ ಚಟುವಟಿಕೆಯ ಲಾಗ್ ಬುಕ್‌ನ (ದಫ್ತರದ) ಮೌಲ್ಯಮಾಪನವನ್ನು ಆಧರಿಸಿ; ಬಾಹ್ಯ ಪರೀಕ್ಷಕರನ್ನು ನೇಮಿಸುವ ಅಗತ್ಯವಿದ್ದಲ್ಲಿ ನೇಮಿಸಿ ಸಂದರ್ಶನ ನಡೆಸಿ; ವಿದ್ಯಾರ್ಥಿಯು ಸಲ್ಲಿಸಿದ ಯೋಜನಾ ವರದಿಯನ್ನು ಆಧರಿಸಿ ನಡೆಸಬೇಕು. ಸಂದರ್ಶನ ಸಮಿತಿಯಲ್ಲಿ ಮೇಲ್ವಿಚಾರಕರು, ಕನ್ನಡ ವಿಭಾಗದ ಮುಖ್ಯಸ್ಥರು (ಮುಖ್ಯಸ್ಥರು ಮತ್ತು ಮೇಲ್ವಿಚಾರಕರು ಒಬ್ಬರೇ ಆಗಿದ್ದಲ್ಲಿ ವಿಭಾಗದ ಹಿರಿಯ ಅಧ್ಯಾಪಕರು, ಏಕೋಪಾಧ್ಯಾಯ ವಿಭಾಗ ಆಗಿದ್ದಲ್ಲಿ ಮೇಲ್ವಿಚಾರಕರು ಮಾತ್ರ) ಮತ್ತು ಬಾಹ್ಯ ಪರೀಕ್ಷಕರು ಹಾಗೂ ಪ್ರಾಂಶುಪಾಲರು ಸದಸ್ಯರಾಗಿರುತ್ತಾರೆ. ಕೋರಮ್ ನಾಲಕ್ನೆ ಮೂರು ಆಗಿರುತ್ತದೆ. ಸಂದರ್ಶನಕ್ಕೆ ೨೦ ಅಂಕಗಳನ್ನು ಮಾತ್ರ ನಿಗಧಿಸಿದೆ. ಅಂಕನೀಡಿಕೆ ವಿವರಗಳು ಕೆಳಕಂಡಂತಿವೆ:

1. ಸಂದರ್ಶನದಲ್ಲಿ ಪ್ರಸ್ತುತಿಯ ಸ್ವರೂಪ ಆಧರಿಸಿ ೧೦ ಅಂಕಗಳನ್ನೂ
2. ಪ್ರಬಂಧದಲ್ಲಿನ/ವರದಿಯಲ್ಲಿನ ಸ್ವಂತಿಕೆ ಮತ್ತು ಯಾವುದೇ ಬಗೆಯ ನವೀನ ಕೊಡುಗೆ ಪರಿಶೀಲಿಸಿ ಸಂದರ್ಶನದಲ್ಲಿ ೧೦ ಅಂಕಗಳನ್ನೂ
3. ಚಟುವಟಿಕೆಗಳ ಗುಣಮಟ್ಟ, ತೊಡಗಿಕೊಳ್ಳುವಿಕೆ, ಚಟುವಟಿಕೆ ದಾಖಲಾತಿ ದಫ್ತರಿನ ಗುಣಮಟ್ಟ ಆಧರಿಸಿ ಮೇಲ್ವಿಚಾರಕರು ೧೦ ಅಂಕಗಳನ್ನೂ
4. ಇಂಟರ್ನ್‌ಶಿಪ್‌ನಿಂದ ಪಡೆದುಕೊಂಡ ಕೌಶಲ್ಯ ಸೆಟ್‌ಗಳ ಗುಣಮಟ್ಟವನ್ನು ಪರಿಶೀಲಿಸಿ ಅಥವಾ ಸಂಶೋಧನಾ ಪ್ರಬಂಧದ ಗುಣಮಟ್ಟವನ್ನು ಪರಿಶೀಲಿಸಿ ಮೇಲ್ವಿಚಾರಕರು ೧೦ ಅಂಕಗಳನ್ನೂ
5. ಸಂಶೋಧನೆಯ ಫಲಿತಾಂಶಗಳ ಮಹತ್ವವನ್ನು (ಪ್ರಾಜೆಕ್ಟ್ ವರ್ಕ್‌ಅನ್ನು-ಸಂಶೋಧನಾ ಪ್ರಬಮಧವನ್ನು) ಮೇಲ್ವಿಚಾರಕರು ಪರಿಶೀಲಿಸಿ ೧೦ ಅಂಕಗಳನ್ನೂ ನೀಡಬಹುದು.

## ಈ) ಪ್ರಾಜೆಕ್ಟ್ ವರ್ಕ್/ ಇಂಟರ್ನ್‌ಶಿಪ್ ವರದಿ/ ಸಂಶೋಧನಾ ಅಧ್ಯಯನ ಪ್ರಬಂಧ

1. ೨೫ರಿಂದ ೫೦ ಪುಟಗಳ ವ್ಯಾಪ್ತಿಯ ಪ್ರಾಜೆಕ್ಟ್ ವರದಿಯನ್ನು / ಸಂಶೋಧನಾ ಪ್ರಬಂಧವನ್ನು ಪ್ರತಿ ವಿದ್ಯಾರ್ಥಿಗಳು ಸಲ್ಲಿಸಬೇಕು.
2. ೬ನೆ ಸೆಮಿಸ್ಟರಿನ ೧೦ನೆ ವಾರದಲ್ಲಿ ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ವರದಿ/ ಸಂಶೋಧನಾ ಅಧ್ಯಯನ ಪ್ರಬಂಧದ ಕರಡು ಪ್ರತಿ ಸಲ್ಲಿಸಿ, ವಿಭಾಗದ ಮುಖ್ಯಸ್ಥರು, ಹಿರಿಯ ಅಧ್ಯಾಪಕರು, ಮೇಲ್ವಿಚಾರಕರು ತಿದ್ದುಪಡಿಗಳನ್ನು ಸೂಚಿಸಿದಲ್ಲಿ ಅವುಗಳನ್ನು ಅಳವಡಿಸಿ ೧೨ನೆ ವಾರದಲ್ಲಿ ಅಂತಿಮ ಪ್ರತಿ ಸಲ್ಲಿಸಬೇಕು.
3. ಇದರ ಜೊತೆಗೆ ಚಟುವಟಿಕೆ ದಾಖಲಾತಿ ದಫ್ತರವನ್ನು (ಐದು ಪುಟಗಳಿಗೆ ಮೀರದಂತೆ) ಸಲ್ಲಿಸಬೇಕು.
4. ಪ್ರಾಜೆಕ್ಟ್ ವರ್ಕ್/ಸಂಶೋಧನಾ ಅಧ್ಯಯನ ಪ್ರಬಂಧ ಕೈಬರಹದಲ್ಲಿ ಅಥವಾ ಮುದ್ರಿತ ರೂಪದಲ್ಲಿ ಇರಬಹುದು.
5. ಪ್ರಾಜೆಕ್ಟ್ ವರ್ಕ್/ಪ್ರಬಂಧವು ಸ್ಪೈರಲ್ ಬೈಂಡ್ ಅಥವಾ ಹಾರ್ಡ್ ಬೈಂಡ್ ಕವರ್ ಪೇಜ್ ಹೊಂದಿರಬಹುದು.
6. ಪ್ರಾಜೆಕ್ಟ್ ವರ್ಕ್‌ನ / ಪ್ರಬಂಧದ ಹಾಳೆಗಳು ಎ೪ರ ಅಳತೆ ಹೊಂದಿರಬೇಕು. ಪುಟಗಳಲ್ಲಿ ಬಲಭಾಗದಲ್ಲಿ ೧.೫ ಇಂಚು, ಇನ್ನುಳಿದ ಮೂರು ಬದಿಗಳಲ್ಲಿ ೧.೦ ಇಂಚು ಮಾರ್ಜಿನ್ನು ಇರಬೇಕು.
7. ಅಕ್ಷರಗಳ ಗಾತ್ರವು (ಫಾಂಟ್ ಸೈಜ್) ೧೨ ಇರಬೇಕು. ಯೂನಿಕೋಡ್ ಆದಲ್ಲಿ ೦೯ ಇರತಕ್ಕುದು. ಸಾಲುಗಳ ಸಂಖ್ಯೆ ಪ್ರತಿ ಪುಟಕ್ಕು ಅಂದಾಜು ೨೬ರಿಂದ ೩೨ ಇರತಕ್ಕುದು.
8. ತಾಂತ್ರಿಕ ಪುಟದ ನಂತರದ ಒಳಪುಟದಲ್ಲಿ ವಿಷಯ, ಮೇಲ್ವಿಚಾರಕರ ಹೆಸರು-ವಿಳಾಸ, ವಿದ್ಯಾರ್ಥಿಯ ಹೆಸರು-ವಿಳಾಸ, ವಿಭಾಗದ – ಕಾಲೇಜು-ವಿವಿಯ ವಿಳಾಸ ಇರಬೇಕು. ಆನಂತರ ಪರಿವಿಡಿ ಪುಟ ಇರಬೇಕು.
9. ಆನಂತರ ಮೇಲ್ವಿಚಾರಕರ/ಮಾರ್ಗದರ್ಶಕರ ಪ್ರಮಾಣಪತ್ರ, ಕನ್ನಡ ವಿಭಾಗದ ಮುಖ್ಯಸ್ಥರ ಪ್ರಮಾಣಪತ್ರ/ ಶಿಫಾರಸು ಪತ್ರ, ವಿದ್ಯಾರ್ಥಿಯ ಘೋಷಣಾ ಪತ್ರ, ಧನ್ಯವಾದ ಪತ್ರಗಳನ್ನು ಪ್ರಾಜೆಕ್ಟಿನಲ್ಲಿ ಕಡ್ಡಾಯವಾಗಿ ಆರಂಭದಲ್ಲಿ ಲಗತ್ತಿಸಿರಬೇಕು.
10. ವರದಿಯ/ಪ್ರಬಂಧದ ಉದ್ದೇಶ, ಮಹತ್ವ, ವಿಧಾನಗಳನ್ನು ಆರಂಭದ ಅಧ್ಯಾಯದಲ್ಲಿ ತಿಳಿಸಬೇಕು.
11. ಕಲಿಕಾ ಫಲಿತಗಳನ್ನು, ಪಡೆದ ಕೌಶಲ, ಪಡೆಯಬಹುದಾದ ಕೌಶಲ, ಪ್ರಾಜೆಕ್ಟಿನ ಮಿತಿ ಮತ್ತು ಸಾಧ್ಯತೆಗಳನ್ನು ಕೊನೆಯಲ್ಲಿ ಬರೆದಿರಬೇಕು.
12. ಕೊನೆಯಲ್ಲಿ ಗ್ರಂಥಋಣ, ಕಲಿಕಾ ಋಣಗಳ ಸೂಚಿಯನ್ನು ಲಗತ್ತಿಸಬೇಕು.
13. ಜೊತೆಯಲ್ಲಿ ಎರಡು ಪುಟಗಳ ಸಾರಾಂಶ ಸಲ್ಲಿಸಬೇಕು. ಸಾರಾಂಶ/ವರದಿ/ಪ್ರಬಂಧದಲ್ಲಿ ಯುಯುಸಿಎಮ್ಮೆಸ್ ನೊಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.
14. ವರದಿ/ ಪ್ರಬಂಧದ ಸಾಫ್ಟ್ ಕಾಪಿಯನ್ನು ವಿದ್ಯಾರ್ಥಿ/ ಮೇಲ್ವಿಚಾರಕರು ಇಚ್ಛಿಸಿದಲ್ಲಿ ವಿಭಾಗದ-ಕಾಲೇಜಿನ ವೆಬ್‌ನಲ್ಲಿ ಸಾರ್ವಜನಿಕ ಬಳಕೆಗೆ

ಪ್ರಕಟಿಸಬಹುದು.

## ಅನುಬಂಧ -೦೧

### ಇಂಟರ್ನ್‌ಶಿಪ್‌ನ ಮೊದಲಿಗೆ ಸಲ್ಲಿಸಬೇಕಾದ ದಾಖಲೆ

| | | |
|---|---|---|
| | ಅಭ್ಯರ್ಥಿಯ ಹೆಸರು | |
| | ಅಧ್ಯಯನ ಮಾಡುತ್ತಿರುವ ಕೋರ್ಸ್ | |
| | ಲಿಂಗ | |
| | ಖಾಯಂ ವಿಳಾಸ | |
| | ಪ್ರಸ್ತುತ ಮೇಲ್ ಐಡಿ | |
| | ಬದಲಿ ವಿಳಾಸ | |
| | ಅಧ್ಯಯನ ಮಾಡುತ್ತಿರುವ ವರ್ಷ | |
| | ಅಧ್ಯಯನ ಮಾಡುತ್ತಿರುವ ಕಾಲೇಜು | |
| | ಮೇಲ್ವಿಚಾರಕರ ಹೆಸರು | |
| | ಮೇಲ್ವಿಚಾರಕರ ಸಂಪರ್ಕ ಸಂಖ್ಯೆ | |
| | ಇಂಟರ್ನ್‌ಶಿಪ್‌ಗಾಗಿ ಸಂಸ್ಥೆಗೆ ಸೇರಿದ ದಿನಾಂಕ | |
| | ಇಂಟರ್ನ್‌ಶಿಪ್ ಪೂರ್ಣಗೊಂಡ ದಿನಾಂಕ | |

ವಿದ್ಯಾರ್ಥಿಯ ಸಹಿ

## ಅನುಬಂಧ -೦೨

### ೬ನೇ ಸೆಮಿಸ್ಟರ್ ಕನ್ನಡ ಪ್ರಾಜೆಕ್ಟಿನ/ ಇಂಟರ್ನ್‌ಶಿಪ್ಪಿನ/ ಸಂಶೋಧನಾ ಅಧ್ಯಯನದ ಸಂಭಾವ್ಯ ವಿಷಯಗಳು

1. ಕನ್ನಡ ದಿನಪತ್ರಿಕೋದ್ಯಮ
2. ಕನ್ನಡ ಸಾಹಿತ್ಯ ಪತ್ರಿಕೋದ್ಯಮ
3. ಟ್ಯಾಬ್ಲಾಯ್ಡ್ ಪತ್ರಿಕೋದ್ಯಮ
4. ಕನ್ನಡ ಪುಸ್ತಕೋದ್ಯಮ
5. ಪುಸ್ತಕ ಮುದ್ರಣ ಮತ್ತು ಮಾರಾಟ ಕೌಶಲ
6. ಪುಸ್ತಕ ಬೈಂಡಿಂಗ್ ಕೌಶಲ
7. ಆಹ್ವಾನ ಪತ್ರ, ಪೋಸ್ಟರ್ ರಚನೆ ಮತ್ತು ಮುದ್ರಣ ಕೌಶಲ
8. ನೆರಳಚ್ಚು, ಸ್ಟೇಶನರಿ ವ್ಯಾಪಾರ ಕೌಶಲ
9. ಡಿಟಿಪಿ ಕೌಶಲ
10. ಕರಡಚ್ಚು ತಿದ್ದುವಿಕೆ ಕೌಶಲ

11. ಅನುವಾದ ಕೌಶಲ
12. ಕನ್ನಡ ಡಿಜಿಟಲ್ ಕೌಶಲ
13. ದೃಶ್ಯಪಠ್ಯ ನಿರ್ಮಾಣ ಕೌಶಲ (ವಿಡಿಯೋಗ್ರಫಿ)
14. ರಂಗಪಠ್ಯ ನಿರ್ಮಾಣ ಕೌಶಲ (ರಂಗರೂಪಾಂತರ)
15. ಚಿತ್ರಕಥೆ ರಚನಾ ಕೌಶಲ
16. ರಾಗಸಂಯೋಜನಾ ಕೌಶಲ
17. ಒಂದು ಸಾಲು ಕಥಾರಚನಾ ಕೌಶಲ
18. ಚಿತ್ರಸಂಭಾಷಣಾ ರಚನೆ ಕೌಶಲ
19. ಪ್ರಸಾದನ ಕೌಶಲ
20. ಧಾರವಾಹಿ ಸ್ಕ್ರಿಪ್ಟ್ ಬರವಣಿಗೆ ಕೌಶಲ
21. ಆಡಿಯೊ-ರೇಡಿಯೋ ಜಾಕಿ ಕೌಶಲ
22. ಆಂಕರಿಂಗ್ – ನಿರೂಪಣಾ ಕೌಶಲ
23. ವಾರ್ತಾವಾಚನ ಕೌಶಲ
24. ಸಂಘಟನಾ ಕೌಶಲ (ಆಯೋಜನೆ-ನಿರ್ವಹಣೆ)
25. ಪ್ರವಾಸ ಮಾರ್ಗದರ್ಶನ ಕೌಶಲ
26. ಪತ್ರಿಕಾ ವರದಿ ತಯಾರಿಕೆ, ಸಂಕ್ಷೇಪೀಕರಣ ಕೌಶಲ
27. ಪ್ರವಾಸ ಮಾರ್ಗದರ್ಶನ
28. ಜೀವನ ಚರಿತ್ರೆ ರಚನಾ ಕೌಶಲ
29. ಕನ್ನಡ ಸಾಹಿತ್ಯ ಸಂಶೋಧನೆ
30. ಸಾಂಸ್ಕೃತಿಕ ಅಧ್ಯಯನ
31. ಕನ್ನಡ ಸಾಹಿತ್ಯ ಚರಿತ್ರೆಗಳ ಸಮೀಕ್ಷೆ